ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಹಾನಗಲ್

**ಸಿ. ಸಿ. ನಂ. 801/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಡಾ. ಶಿವಕುಮಾರ ಜಿ ಶಿವೂರು | ಪಿಡಬ್ಲ್ಯೂ | **6** |
| ತಂದೆ/ಗಂಡನ ಹೆಸರು | : | ಗುರುಲಿಂಗಪ್ಪ | ಸಿಡಬ್ಲ್ಯೂ | **11** |
| ವಯಸ್ಸು | : | 35 ವರ್ಷ | | |
| ಉದ್ಯೋಗ | : | ತಜ್ಞರು ತಾಲೂಕಾ ಆಸ್ಪತ್ರೆ ಹಾನಗಲ್ | | |
| ವಾಸಸ್ಥಳ | : | ಹಾನಗಲ್ | | |

ದಿನಾಂಕ **21.03.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ ವಿ ಸಿ ಮೂಲಕ

ನಾನು ಜೂನ್ 2021 ರಿಂದ ಇಲ್ಲಿಯವರೆಗೆ ಹಾನಗಲ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 10.07.2023 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ-4 ರವರನ್ನು ಚಾಸಾ-1 ರವರು ನನ್ನ ಮುಂದೆ ಹಾಜರುಪಡಿಸಿದ್ದು ಅಪಘಾತದಲ್ಲಿ ಆದ ಗಾಯದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಹಾಜರಾಗಿದ್ದು, ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿವೆ.

1. ಬಲಗಾಲಿಗೆ ಕ್ರಸ್ ಇಂಜುರಿ ಕಂಡು ಬಂದಿತ್ತು.

ಅವರನ್ನು ಹೆಚ್ಚಿನ ಚಿಕಿತ್ಸೆಗೆ ಕಳುಹಿಸಿಕೊಡಲಾಗಿತ್ತು. ಕೆ ಎಸ್ ಹೆಗಡೆ ಆಸ್ಪತ್ರೆ ಮಂಗಳೂರು ಅವರಿಂದ ವರದಿ ಪಡೆದಿದ್ದು ಅದರ ಪ್ರಕಾರ ಗಾಯಾಳುವಿನ ಬಲಗಾಲಿನ ಮೂಳೆಯು ಸಂಪೂರ್ಣ ಮುರಿದಿತ್ತು.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸದರಿ ಗಾಯ fresh Injury ಇತ್ತು ಮೇಲೆ ಹೇಳಿದ ಗಾಯ ಕಾಲು ಮೇಲೆ ದೊಡ್ಡ ವಾಹನ ಹಾಯ್ದು ಹೋದರೆ ಆಗುವ ಸಾಧ್ಯತೆ ಇರುತ್ತದೆ. ಗಾಯದ ಪ್ರಮಾಣಪತ್ರವನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿ ಪರ ಶ್ರೀ. ಎಂ ಎಂ ಕೆ ವಕೀಲರಿಂದ:</u>

ನಿಪಿ-6 ರಲ್ಲಿ ಗಾಯದ ಅಳತೆ ಬರೆದಿಲ್ಲ ಎಂದರೆ ಸರಿ. ಮೇಲೆ ಹೇಳಿದ ಗಾಯ ಬೈಕ ಮೇಲೆ ವೇಗವಾಗಿ ಹೋಗುವಾಗ ಬಿದ್ದರೆ ಆಗುವ ಸಾದ್ಯತೆ ಇದೆ ಎಂದರೆ ಸರಿ. ಗಾಯಾಳುವಿಗೆ ಸಹಾಯವಾಗಲಿ ಎಂದು ಸುಳುಳ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**: ಮರುವಿಚಾರಣೆ :** ಇಲ್ಲ.</u>

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್